ಶ್ರೀ ಕೆ. ಮಲ್ಲಪ್ಪ.—ಈ ಸರ್ಕಾರದವರು ಇಂತಹ ಸೆಂಟರನ್ನು ಕೊಡತಕ್ಕ ವಿಚಾರದಲ್ಲಿ ಎಲ್ಲ ವನ್ನು ವಿಚಾರಮಾಡಿ ಇಲ್ಲಿ ಒಂದು ಶಾಖೆಯನ್ನು ತೆರೆಯಬೇಕೆನ್ನುವಾಗ ಇದಕ್ಕೆ ಬೇಕಾಗುವ ಎಲ್ಲ ಕಾರಣಗಳನ್ನು ಪರಿಶೀಲಿಸಿ ಕೊನೆಗೆ ಮಧುಗಿರಿಯಲ್ಲಿ ಆಗಬಹುದೆಂದು ತೀರ್ಮಾನಮಾಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಧುಗಿರಿಯಲ್ಲಿ ಈ ಸೆಂಟರು ತೆರೆಯಲು ಇದ್ದ ಗುಣಗಳೇನು ಮತ್ತು ತಿಪಟೂರಿನಲ್ಲಿ ತೆರೆಯಲು ಇದ್ದಂತಹ ಅವಗುಣಗಳೇನು ?

ಶ್ರೀ ಕೆ. ಮಲ್ಲಪ್ಪ.—ಮಧುಗಿರಿ ಸ್ವಲ್ಪ ಹಿಂದುಳಿದಿದೆ. ಅದು ಒಂದು ಬರಗಾಲದ ಏರಿಯಾ ಎಂದು ಬದಲಾವಣೆ ಮಾಡಿಕೊಟ್ಟಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹೋಗಲಿ, ಎನೋ ಆದದ್ದು ಆಗಿ ಹೋಯಿತು. ಈಗಲಾದರೂ ಹೆಚ್ಚಿನ ತರಪೇತಿಯಾಗತಕ್ಕಂಥ ಅವಕಾಶವಿಲ್ಲವೆ ಇರುವುದರಿಂದ, ಒಂದು Additional Centre ತಿಪಟೂರಿಗೆ ಕೊಡುತ್ತೀರಾ !

ಶ್ರೀ ಕೆ. ಮಲ್ಲಪ್ಪ.—ಈಗಾಗಲೇ 22 ಸೆಂಟರುಗಳು ನಮ್ಮ ರಾಜ್ಯದಲ್ಲಿವೆ. ಮತ್ತೆ ತುಮಕೂರಿನಲ್ಲಿ ಕೂಡ ಒಂದು ಸೆಂಟರ್ ಇದೆಯೆನ್ನುವುದು ತಮ್ಮ ತಿಳಿವಳಿಕೆಗೆ ಬಂದಿರಬಹುದು. ತುಮಕೂರು ಡಿಸ್ಟ್ರಿಕ್ಟಿಗೆ ಎರಡು ಸೆಂಟರುಗಳಿವೆ. ಇತರ ಡಿಸ್ಟ್ರಿಕ್ಟುಗಳಲ್ಲಿ ಅಷ್ಟೂ ಇಲ್ಲ. ಅದೂ ಅಲ್ಲದೆ ತಿಪಟೂರಿನಲ್ಲಿ ಒಂದು ನಾರು ಕೈಗಾರಿಕೆ ಸ್ಥಾಪನೆ ಮಾಡಬೇಕೆಂದು ಏರ್ಪಾಡಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆದರೂ ಸಹ ವಿರೋಧಿ ಪಕ್ಷದ ಸದಸ್ಯರಿರುವ ಊರಿಗೆ ಬಂದಂಥ ಸೆಂಟರನ್ನು ಅಲ್ಲಿಗೆ ಹಾಕಿರುವುದರಿಂದ, ದಯೆಯಿಟ್ಟು ಅಧಿಕಾರಿಗಳ ರಿಪೋರ್ಟಿನಲ್ಲಿ ತಿಪಟೂರಿಗೆ ಕೊಡಬೇಕೆಂದಿರುವುದರಿಂದ, ಸರ್ಕಾರ ಅದರಂತೆ ತೀರ್ಮಾನ ಮಾಡಿ, ಕಡೆಗೆ influence ಗೆ ಒಳಗಾಗಿ training centre ಬದಲಾಯಿಸಿರುವುದರಿಂದ ಇನ್ನೊಂದು ಸೆಂಟರನ್ನು ತಿಪಟೂರಿಗೆ ಕೊಡಲೇಬೇಕಲ್ಲವೇ ?

ಶ್ರೀ ಕೆ. ಮಲ್ಲಪ್ಪ.—ಬರೀ ಪಕ್ಷಪಾತ ದೃಷ್ಟಿಯಿಂದ ವಿಚಾರ ಮಾಡಿ ಸರ್ಕಾರ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನೀವು ಮಾಡಿಲ್ಲ.

ಶ್ರೀ ಕೆ. ಮಲ್ಲಪ್ಪ.—ಹಾಗೆ ಮಾಡಿದ್ದರೂ. ಮುಂದೆಯೂ ಸರ್ಕಾರ ಆದರ ಜವಾಬ್ದಾರಿಗೆ, ಹೊಣೆಗಾರಿಕೆ ಹೊರಬೇಕು. ಎಲ್ಲಾ ವಿಚಾರಮಾಡಿ, ಅಧಿಕಾರಿಗಳು ರಿಪೋರ್ಟುಗಳನ್ನು ತರಿಸಿಕೊಂಡು, ವಿಮರ್ಶೆಮಾಡಿ, ತೀರ್ಮಾನಮಾಡಿದ್ದಾರೆ. ಮಧುಗಿರಿಗೆ ಕೊಟ್ಟಿರುವುದನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ. ಹೆಚ್ಚಿಗೆ ಸೆಂಟರ್ ಕೊಡಬೇಕಾದರೆ ಕಷ್ಟವಾಗುತ್ತದೆ. ಹಣದ ಅಡ್ಡಿ ಇದೆ. ಇಂಥ ತುರ್ತು ಪರಿಸ್ಥಿತಿಯಲ್ಲಿ ನಮ್ಮ ಹಣಕಾಸಿನ ವ್ಯವಸ್ಥೆ ಯಾವ ರೀತಿಯಲ್ಲಿ ಇರುತ್ತೆ ಅನ್ನುವುದು ತಮಗೇ ವೇದ್ಯವಾಗಿದೆ.

Repairs to Sri Mallikarjunaswamy and Sri Kaitabheswaraswamy Temples in Sagar and Sorab Taluks.

*Q.—333. **Sri V. S. LAKSHMIKANTAPPA** (Sagar).—

Will the Government be pleased to state :—

the agency through which the repairs of Sri Mallikarjunaswamy Temple at Kalasi in Sagar Taluk and Sri Kaitabheswaraswamy temple in Sorab Taluk have been executed and the amount spent for the respective works ?

*A.—**Sri M. V. KRISHNAPPA** (Minister for Revenue).—

The Archæological Department is taking necessary action for their repairs, and so far, no amount has been spent.

ಶ್ರೀ ಪಿ. ಎಸ್. ಲಕ್ಷ್ಮೀಕಾಂತಪ್ಪ.—ತಮ್ಮ ಉತ್ತರದಲ್ಲಿ ದುರಸ್ತು ಕಾಮಗಾರಿಯನ್ನು ನಡೆಸುವ ಬಗ್ಗೆ ಕ್ರಮವನ್ನು ಕೈಗೊಳ್ಳುತ್ತಿದೆ ಮತ್ತು ಇದುವರೆಗೂ ಹಣವನ್ನೇನೂ ಪೆಚ್ಚುಮಾಡಿಲ್ಲ ವೆಂದು ಹೇಳಿದ್ದೀರಿ. ಹೋದ ಮಳೆಗಾಲದ ಮುಂದೆ ಎರಡು ದೇವಸ್ಥಾನಗಳ ಛಾವಣಿ ದುರಸ್ತಿ ನಡೆದು, ದುರಸ್ತಿಯಾಗುವುದಕ್ಕೆ ಮುಂಚೆ ಇದ್ದ ಸ್ಥಿತಿಗಿಂತಲೂ ನಾದುರಸ್ತಿಯಾಗಿದೆ. ಹಾಗಿದ್ದ ಮೇಲೆ ಪ್ರಾಚೀನ ಶೋಧನಾ ಇಲಾಖೆಯವರು ದುರಸ್ತಿ ನಡೆಸುವ ಉದ್ದೇಶವಾದರೂ ಏನು ಅನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರಾಚೀನ ಶೋಧನಾ ಇಲಾಖೆ ನಮ್ಮ ಮಿನಿಸ್ಟ್ರಿಯಲ್ಲಲ್ಲ, ಇಂದ ಸ್ಟ್ರೀಸ್ ಮಿನಿಸ್ಟ್ರಿಯಲ್ಲಿದೆ. ಆದ್ದರಿಂದ ಅವರಿಗೇ ಈ ಪ್ರಶ್ನೆ ಹಾಕಿದ್ದರೆ ಚೆನ್ನಾಗಿತ್ತು. ಇದು ತಪ್ಪಾಗಿ ನನಗೆ ಬಂದಿದೆ.

Sri K. P. REVANNASIDDAPPA.—On a Point of Order, Sir.

Mr. SPEAKER.—I know the point and it will be answered. If the answer is not ready, I will hold over the question.

Sri M. V. KRISHNAPPA.—It is a question about old temples. All temples come under the Muzrai Department. The question is : " who repaired it ", and I have answered. The estimate was prepared for Rs. 2,900 and no money was spent.

Mr. SPEAKER.—To that extent, the Hon. Minister has done a good job, but the correct information should have been furnished by the Government. I will hold over this question for to-morrow.

— —

Amount spent since 1959 to Mahila Samajas in Gauribidanur Taluk.

*Q.—370. **Sri R. N. LAKSHMIPATHI** (Gauribidanur). –

Will the Government be pleased to state :—

(*a*) the amount spent since 1959 to Mahila Samajas under the Budget head 'Industries in Gauribidanur taluk'.

(*b*) the details of the expenditure incurred in each centre towards the establishment and other expenses in the above taluk ?

A.— **Sri K. MALLAPPA** (Minister for Industries and Commerce).–

(*a*) Rs. 7,642 (Rs. 2,592 towards recurring and Rs. 5,050 towards non-recurring expenditure).

(*b*)

	1959–60		1960–61	
	Recurring	*Non-Recurring*	*Recurring*	*Non-Recurring*
	Rs.	Rs.	Rs.	Rs.
(1) Mahila Samaja, Gowribidnur	432	500	432	1,100
(2) Mahila Samaja, Gollahalli.	...	...	432	650
(3) Mahila Samaja, Narasapura.	...	...	432	650
(4) Mahila Samaja, Manivala	432	650	432	1,500
Total ...	864	1,150	1,728	3,900